ಇದೆಯೇ ಎನ್ನುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಆದರೆ ಹಾರ್ಡ್‌ಶಿಫ್‌ನ್ನು ಮಾಡುತ್ತಿಲ್ಲ. ಸ್ಕಾಲರ್‌ಶಿಫ್‌ನ್ನು ಕೊಡುತ್ತಿದ್ದೇವೆ ಹಾಗೂ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ.

ವಿಷಯ:- ರೇಷ್ಮೆ ಇಲಾಖೆಯಲ್ಲಿ ಕಾಮಗಾರಿ ಕೆಲಸಗಳನ್ನು ಅಧಿಕೃತವಾದ ಇಂಜಿನಿಯರ್‌ರವರ ಮೇಲ್ವಿಚಾರಣೆ ಇಲ್ಲದೆ ನಿರ್ವಹಿಸುತ್ತಿರುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 70(418)

ಶ್ರೀ ಕೆ.ಎಂ.ಪುಟ್ಟು(ಕಿರುಗಾವಲು)

ಮಾನ್ಯ ರೇಷ್ಮೆ, ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೇಷ್ಮೆ ಇಲಾಖೆಯಲ್ಲಿ ಸುಮಾರು ಆರು ಕೋಟಿ ರೂಪಾಯಿಗಳ ಕಾಮಗಾರಿ ಕೆಲಸಗಳು, ಅಧಿಕೃತವಾದ ಸಹಾಯಕ ಕಾರ್ಯಪಾಲಕ ಇಂಜಿನೀಯರ್‌ರವರ ಮೇಲ್ವಿಚಾರಣೆ ಇಲ್ಲದೆ ನಿರ್ವಹಿಸುತ್ತಿರುವುದು ಹಾಗೂ ಅಧಿಕೃತ ಅಧಿಕಾರಿಯಿಂದ ಕಾಮಗಾರಿಯ ಅಳತೆಗಳು ಪರಿಶೀಲನೆಯಾಗದೆ ಬಿಲ್ಲುಗಳು ಪಾವತಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ತುಮಕೂರು ಜಿಲ್ಲೆ ಹಾಗೂ ಮಾಗಡಿ ತಾಲ್ಲೂಕಿನಲ್ಲಿ ನಡೆಯುತ್ತಿರುವ ಕಾಮಗಾರಿ ಕೆಲಸಗಳನ್ನು ನೋಡಿಕೊಳ್ಳುತ್ತಿರುವ ಅಧಿಕೃತ ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಯಾರು?

ಇ) ಅವರನ್ನು ಈ ಕಾರ್ಯಕ್ಕೆ ನೇಮಿಸಿರುವ ಸರ್ಕಾರದ (ಲೋಕೋಪಯೋಗಿ ಇಲಾಖೆಯ) ಅಧಿಕೃತ ಆದೇಶ ಯಾವುದು?

ಡಾ ಜಿ.ಪರಮೇಶ್ವರ

(ರೇಷ್ಮೆ, ಕೃಷಿ ರಾಜ್ಯ ಸಚಿವರು)

-ಇಲ್ಲ-

ಒಬ್ಬರು ಸಹಾಯಕ ಕಾರ್ಯಪಾಲಕ ಅಭಿಯಂತರರು ಅಧಿಕೃತವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಅವರನ್ನು ಈ ಹುದ್ದೆಗೆ ನೇಮಿಸಿದ ಇಲಾಖಾ ಕ್ರಮವನ್ನು ಕೆಲಸದ ಹಿತದೃಷ್ಟಿಯಿಂದ ಒಪ್ಪಿಕೊಳ್ಳಬೇಕೆಂದು ಲೋಕೋಪಯೋಗಿ ಇಲಾಖೆಯೊಡನೆ ವ್ಯವಹರಿಸಲಾಗಿದೆ.

ಶ್ರೀ ಕೆ.ಎಂ.ಪುಟ್ಟು: ಸನ್ಮಾನ್ಯ ಅಧ್ಯಕ್ಷರೇ, ಒಂದು ಕಡೆ ಅಧಿಕೃತ ಇಂಜಿನಿಯರ್‌ಗಳಿಂದ ಕೆಲಸವನ್ನು ಮಾಡಿಸಿದ್ದೇವೆಂದು ಹೇಳುತ್ತಾರೆ ಮತ್ತೊಂದು ಕಡೆ ಎರವಲು ಸೇವೆಯನ್ನು ಪಡೆದಮೇಲೆ ಆ ಇಂಜಿನಿಯರನ್ನು ಆ ಇಲಾಖೆಯಲ್ಲಿಯೇ ಇಟ್ಟುಕೊಳ್ಳಬೇಕೆಂದು ಇಲಾಖೆಗೆ ಬರೆಯುತ್ತಾರೆ. ಈ ರೀತಿ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ದಿನಾಂಕ: 21-1-93 ರಲ್ಲಿ ಯಾರು ಎ.ಇ.ಇ. ಇದ್ದಾರೆ ಅವರು ಸಿ.ಟಿ.ಸಿ ಪ್ರಕಾರ ಮಾತ್ರ ಸಂಸ್ಥೆಗೆ ಹೋಗಿದ್ದಾರೆ. ಅಲ್ಲಿಂದ ನೀರಾವರಿ ಇಲಾಖೆಗೆ ಎರವಲನ್ನು ಕೊಟ್ಟಿದ್ದಾರೆ. ಆದರೆ ಅಂದಿನಿಂದ ಇಂದಿನವರೆಗೆ ಅಧಿಕೃತವಲ್ಲದ ಇಂಜಿನಿಯರಿಂದ ಸುಮಾರು 6 ಕೋಟಿ ರೂಪಾಯಿಗಳ ಕೆಲಸವನ್ನು ಇವರು ಮಾಡಿಸುತ್ತಿದ್ದಾರೆ, ಈವತ್ತಿನವರೆಗೂ ಬಿಲ್ಲನ್ನು ಕೊಡುತ್ತಿದ್ದಾರೆ, ಎಂ.ಇ.ಪುಸ್ತಕವನ್ನು ಬರೆಯುತ್ತಿದ್ದಾರೆ. ಆದರೆ ಯಾವ ಅಧಿಕಾರಿ ಕಾನೂನನ್ನು ಮುರಿದಿದ್ದಾರೋ, ಅಂಥ ಭ್ರಷ್ಟ ಅಧಿಕಾರಿಗೆ ಸಹಾಯಕರಾಗಿ ಮಾನ್ಯ ಸಚಿವರು ಉತ್ತರವನ್ನು ಹೇಳುವುದು ಅಷ್ಟೊಂದು ಸಮಂಜಸವಾಗಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಡಾ: ಜಿ.ಪರಮೇಶ್ವರ:- ಸನ್ಮಾನ್ಯ ಅಧ್ಯಕ್ಷರೇ, ಅವರು ಹೇಳುತ್ತಾ ಇರತಕ್ಕದ್ದು ಏನೆಂದರೆ: ಕುಣಿಗಲ್ ಮತ್ತು ಮಾಗಡಿಯಲ್ಲಿ ಏನು ಬಿತ್ತನೆ ವಲಯವಿದೆ, ಅಲ್ಲಿಗೆ ಒಬ್ಬ ಸಹಾಯಕಕಾರ್ಯಪಾಲಕ ಅಭಿಯಂತರನ್ನು 1993-94ಕ್ಕೆ ಸುಮಾರು 5 ಕೋಟಿ ಕಾಮಗಾರಿಗಳನ್ನು ನೋಡಿಕೊಳ್ಳಬೇಕೆಂದು, 14-7-92 ರಿಂದ ಖಾಲಿ ಬಿದ್ದಿದ್ದಂಥ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ನಮ್ಮ ಇಲಾಖೆಯಲ್ಲಿಯೇ ಇದ್ದವರನ್ನು ಅಲ್ಲಿಗೆ ವರ್ಗಾವಣೆ ಮಾಡಿಕೊಂಡಿದ್ದೇವೆ. ಕಾರಣವೇನೆಂದರೆ ಈ 5 ಕೋಟಿ ರೂಪಾಯಿಗಳ ಕಾಮಗಾರಿಯನ್ನು ಶ್ರದ್ಧೆಯಿಂದ ಮಾಡಬೇಕು, ಈ ಕುಣಿಗಲ್ ಬಿತ್ತನೆ ವಲಯ ಏನು ಇದೆ ಅದು ಸಮರ್ಪಕವಾಗಿ ಆಗಬೇಕೆಂದು ವರ್ಗಾವಣೆ ಮಾಡಿಕೊಂಡಿದ್ದೇವೆ. ಸನ್ಮಾನ್ಯ ಸದಸ್ಯರು ಹೇಳಿದಂತೆ ನಾವು ಏನು ಪಿ.ಡಬ್ಲ್ಯೂ.ಡಿ. ಇಲಾಖೆಯಿಂದ 21-1-93ರಲ್ಲಿ ಅವರನ್ನು ತೆಗೆದುಕೊಂಡಿದ್ದೆವೋ ಅವರನ್ನು ವಾಪಸ್ ಕೊಡಬೇಕೆಂದು ಕೇಳಿರುವದು ನಿಜ. ಆದರೆ ನಮಗೆ ಈ 5 ಕೋಟಿ ರೂಪಾಯಿಯಷ್ಟು ಕೆಲಸ ಇನ್ನೂ ಬಾಕಿ ಇರುವುದರಿಂದ, ಅವರ ಕೆಲಸ ಇನ್ನೂ ಆಗತ್ಯವಿದೆ ಎಂದು ನಾವು ಲೋಕೋಪಯೋಗಿ ಇಲಾಖೆಗೆ ಬರೆದುಕೊಂಡಿದ್ದೇವೆ. ಆ ಕಾರಣಕ್ಕಾಗಿ ಅವರು ಯಾವ ತಪ್ಪನ್ನೂ ಮಾಡಿಲ್ಲ, ಮತ್ತು ನಾನು ತಪ್ಪು ಮಾಹಿತಿಯನ್ನು ಕೊಟ್ಟಿದ್ದೇನೆಂದು ಅವರು ಹೇಳುತ್ತಿರುವುದು ಸರಿಯಲ್ಲ. ಒಂದು ವೇಳೆ ಮಾನ್ಯ ಸದಸ್ಯರು ಹೇಳುವುದರಲ್ಲಿ ಯಾವುದಾದರೊಂದು ಕೆಲಸದಲ್ಲಿ ಕಳಪೆಯಾಗಿದ್ದರೆ, ಏನಾದರೂ ತಪ್ಪನ್ನು ಮಾಡಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಎಂ.ಪುಟ್ಟು:- ಅಧ್ಯಕ್ಷರೇ ಸಿ.ಟಿ.ಸಿ ಫಾರಂನಲ್ಲಿ ಅವನು ಕಾರ್ಯ ಮುಕನಾದ ಮೇಲೆ ಇವರ ಇಲಾಖೆಯಲ್ಲಿ ಎಷ್ಟು ಕೋಟಿ ರೂಪಾಯಿಗಳ ಕೆಲಸವಿದ್ದರೂ ಕೂಡ ಹೇಗೆ ಕೆಲಸ ಮಾಡಲು ಬರುತ್ತದೆ? ಅವನನ್ನು ಮರಳಿ ಮಾತ್ರ ಸಂಸ್ಥೆಗೆ ಕೊಟ್ಟ ಮೇಲೆ, ಅವನನ್ನು ಸಮರ್ಥನೆ ಮಾಡಿಕೊಂಡು ಹೇಗೆ ಇವರು ಮಾತನಾಡುತ್ತಾರೆ? ಸಿ.ಟಿ.ಸಿ ಎಂದರೆ ಏನು ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಿದರೆ ಸಾಕು, ಸರಿಯಾಗುತ್ತದೆ. 21-1-93ರಲ್ಲಿ ಅವನು ಇಲಾಖೆಯಿಂದ ವಾಪಸ್ ಹೋದಮೇಲೆ ಅವನನ್ನು ನಾವು ಇಟ್ಟುಕೊಂಡಿದ್ದೇವೆ, ಕೆಲಸದ ಕಾರ್ಯಭಾರವಿದೆ, ಅವನನ್ನು ಆ ಕಾರಣಕ್ಕಾಗಿ ಇಟ್ಟುಕೊಂಡಿದ್ದೇವೆ ಎಂದು ಹೇಳಿದರೆ ಹೇಗೆ? ಅವರನ್ನು ಪುನಃ ಆ ಇಲಾಖೆಗೆ ಬರೆದು ಮರಳಿ ಪಡೆಯಬಹುದಾಗಿತ್ತು; ಆದರೆ ಇವರು ಆ ಕೆಲಸಕ್ಕೆ ಹೋಗಲಿಲ್ಲ; ಅವನನ್ನು ಬಿಡುಗಡೆ ಮಾಡಲಿಲ್ಲ, ಅವನನ್ನು ಉದ್ದೇಶಪೂರ್ವಕವಾಗಿ ಇಟ್ಟುಕೊಂಡರು.

ಡಾ:ಜಿ.ಪರಮೇಶ್ವರ:- ಅವರು ಸಿ.ಟಿ.ಸಿ ಗೆ ಸಹಿ ಹಾಕಿದ್ದರೂ ಕೂಡ, ನಾನು ಮೊದಲೇ ಹೇಳಿದಹಾಗೆ ಅವರ ಸೇವೆಯನ್ನು ಮತ್ತೆ ನಮಗೆ ಮುಂದುವರೆಸಿಕೊಡಬೇಕೆಂದು ನಾವು ಲೋಕೋಪಯೋಗಿ ಇಲಾಖೆಗೆ ಬರೆದುಕೊಂಡಿದ್ದೇವೆ. ಆ ಕಾರಣಕ್ಕಾಗಿ ಅವರು ಮುಂದುವರೆಯುತ್ತಿದ್ದಾರೆಯೇ ವಿನಹ ಮತ್ತೆ ಯಾವ ಅವ್ಯವಹಾರವೂ ಸಹ ನಡೆದಿಲ್ಲ. ಒಂದುವೇಳೆ ಆ ರೀತಿ ಅನ್ಯಾಯವಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದ್ದರೆ ಅದನ್ನು ನನ್ನ ಗಮನಕ್ಕೆ ತನ್ನಿ;ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ವಿಷಯ:- ಬೆಳಗಾವಿ ಜಿಲ್ಲೆಯಲ್ಲಿ ಕಬ್ಬು ಅರೆಯುವಿಕೆ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 71(379)

ಶ್ರೀ ಶಿವಾನಂದ ಎಚ್.ಕೌಜಲಗಿ(ಬೈಲಹೊಂಗಲ)